# ಲ್ಯಾಂಡ್‌ಲೈನ್ ನಂಬರ್‌ಗೂ ಬಂತು ವಾಟ್ಸ್‌ಆ್ಯಪ್



ವಾಟ್ಸ್‌ಆ್ಯಪ್‌ಗೆ ಲಾಗಿನ್ ಆಗಬೇಕಿದ್ದರೆ ಮೊಬೈಲ್ ನಂಬರ್ ಕಡ್ಡಾಯ. ಮೊಬೈಲ್ ನಂಬರ್ ಇಲ್ಲದೆ ವಾಟ್ಸ್‌ಆ್ಯಪ್‌ಗೆ ಲಾಗಿನ್ ಆಗುವುದು ಪ್ರಸ್ತುತ ಸಾಧ್ಯವಿಲ್ಲ. ಮೊಬೈಲ್ ನಂಬರ್ ಹೊರತಾಗಿಯೂ ಲ್ಯಾಂಡ್‌ಲೈನ್ ನಂಬರ್ ಬಳಸಿ ವಾಟ್ಸ್‌ಆ್ಯಪ್‌ಗೆ ಲಾಗಿನ್ ಆಗಬಹುದೆಂಬ ಹೊಸ ಸುದ್ದಿಯೊಂದು ಈಗ ವಾಟ್ಸ್‌ಆ್ಯಪ್ ಕಡೆಯಿಂದ ಹೊರಬಿದ್ದಿದೆ.




ಹೊಸ ಪ್ರಕ್ರಿಯೆ ಸಾಮಾನ್ಯವಾಗಿ ಎಲ್ಲರೂ ಬಳಸುವ ವಾಟ್ಸ್‌ಆ್ಯಪ್ ಆ್ಯಪ್‌ನಲ್ಲಿ ಸಾಧ್ಯವಾಗದು. ವಾಟ್ಸ್‌ಆ್ಯಪ್‌ನಲ್ಲಿ ವ್ಯವಹಾರ ನಡೆಸುವವರಿಗೆಂದು ಹಿಂದೆಯೇ 'ವಾಟ್ಸ್‌ಆ್ಯಪ್ ಬಿಸಿನೆಸ್' ಆ್ಯಪ್ ಅನ್ನು ಬಿಡುಗಡೆ ಮಾಡಲಾಗಿದ್ದು, ಆ ಆ್ಯಪ್‌ಗೆ ಲ್ಯಾಂಡ್‌ಲೈನ್ ನಂಬರ್ ಬಳಸಿ ಲಾಗಿನ್ ಆಗಲು ಅವಕಾಶ ಕಲ್ಪಿಸಲಾಗಿದೆ. ಆ ಆ್ಯಪ್ ಬಳಕೆ ಸಾಮಾನ್ಯ ವಾಟ್ಸ್‌ಆ್ಯಪ್‌ಗಿಂತ ಭಿನ್ನವಾಗಿರುತ್ತದೆ.

'ವಾಟ್ಸ್‌ಆ್ಯಪ್ ಬಿಸಿನೆಸ್' ಆ್ಯಪ್‌ಗೆ ಲ್ಯಾಂಡ್‌ಲೈನ್ ನಂಬರ್‌ನಿಂದ ಲಾಗಿನ್ ಆಗಲು, ಮೊದಲು ಮೊಬೈಲ್‌ನಲ್ಲಿ ಈ ಆ್ಯಪ್ ಡೌನ್‌ಲೋಡ್ ಮಾಡಿ ಇನ್‌ಸ್ಟಾಲ್ ಮಾಡಬೇಕು. ನಂತರ, ಅದು ಮೊಬೈಲ್ ನಂಬರ್ ಹಾಗೂ ಒಟಿಪಿ (ಒನ್ ಟೈಮ್ ಪಾಸ್‌ವರ್ಡ್) ಕೇಳುತ್ತದೆ. ಮೊಬೈಲ್ ನಂಬರ್ ಕೇಳುವ ಜಾಗದಲ್ಲಿ +91 ಹಾಗೂ ನಿಮ್ಮ ಲ್ಯಾಂಡ್‌ಲೈನ್ ನಂಬರ್ ಎಂಟ್ರಿ ಮಾಡಿ. ಉದಾಹರಣೆ ನಿಮ್ಮ ಲ್ಯಾಂಡ್‌ಲೈನ್ ನಂಬರ್ 080561****5 ಎಂದಿದ್ದರೆ ಶೂನ್ಯ (0) ತೆಗೆದು ಆ ಜಾಗದಲ್ಲಿ +9180561****5 ಸೇರಿಸಬೇಕು.

ಬಳಿಕ ಆ್ಯಪ್ ನಿಮ್ಮ ಲ್ಯಾಂಡ್‌ಲೈನ್ ನಂಬರ್‌ಗೆ ಒಟಿಪಿ ಕಳುಹಿಸುತ್ತದೆ. ಅದು ನಿಮಗೆ ಡಿಸ್‌ಪ್ಲೇ ಆಗುವುದಿಲ್ಲ. ಒಟಿಪಿ ಸಮಯ ಮುಕ್ತಾಯದವರೆಗೂ ಕಾದು ಬಳಿಕ 'ಕಾಲ್‌ಮಿ' ಆಪ್ಷನ್ ಅನ್ನು ಕ್ಲಿಕ್ಕಿಸಿ. ನಿಮ್ಮ ಲ್ಯಾಂಡ್‌ಲೈನ್ ನಂಬರ್‌ಗೆ ಕರೆಯ ಮೂಲಕ ಒಟಿಪಿ ಲಭ್ಯವಾಗುತ್ತದೆ. ಆ ಒಟಿಪಿಯನ್ನು ಆ್ಯಪ್‌ನಲ್ಲಿ ನಮೂದಿಸಿದರೆ ಅದು ಬಳಕೆಗೆ ಸಿದ್ಧ. ಈ ಆ್ಯಪ್‌ನಲ್ಲಿ ಸಂಪರ್ಕ ಸಂಖ್ಯೆಗಳನ್ನು ಟೈಪಿಸಿ ಸೇರಿಸಬೇಕಾಗುತ್ತದೆ. ಸ್ವಯಂಚಾಲಿತ ರಿಪ್ಲೇ ಆಪ್ಷನ್ ಸೌಲಭ್ಯವೂ ಇದೆ. ■

### 'ಶಾಪಿಂಗ್ ಫೀಚರ್' ಶೀಘ್ರ

ಆನ್‌ಲೈನ್ ಶಾಪಿಂಗ್ ಮಾಡಬಯಸುವ ತನ್ನ ಗ್ರಾಹಕರಿಗೆ ಅನುಕೂಲವಾಗಲೆಂದು 'ಶಾಪಿಂಗ್ ಫೀಚರ್' ಅನ್ನು ಶೀಘ್ರವೇ ವಾಟ್ಸ್‌ಆ್ಯಪ್‌ಗೆ ಸೇರಿಸಲಾಗುತ್ತಿದೆ. ಎಫ್ 8 ವಾರ್ಷಿಕ ಡೆವಲಪರ್ಸ್ ಸಮಾವೇಶದಲ್ಲಿ ಈ ಬಗ್ಗೆ ಫೇಸ್‌ಬುಕ್ ಪ್ರಸ್ತಾಪಿಸಿದ್ದು, ಎಲ್ಲವೂ ಅಂದುಕೊಂಡಂತೆ ಸಾಗಿದರೆ ಶೀಘ್ರವೇ ಈ ಫೀಚರ್ ವಾಟ್ಸ್‌ಆ್ಯಪ್‌ಗೆ ಸೇರ್ಪಡೆಯಾಗಲಿದೆ. ಇದಕ್ಕಾಗಿ ವಾಟ್ಸ್‌ಆ್ಯಪ್‌ನಲ್ಲಿ ಯಾವುದೇ ಜಾಹೀರಾತು ಪ್ರತ್ಯೇಕವಾಗಿ ಪ್ರಕಟವಾಗದು. ಚಾಟಿಂಗ್ ರೀತಿಯಲ್ಲೇ ಶಾಪಿಂಗ್ ಫೀಚರ್ ಇರಲಿದ್ದು, ಅದಕ್ಕೆ ಭೇಟಿ ಕೊಟ್ಟು ಇಷ್ಟವಾದ ವಸ್ತುಗಳನ್ನು ಶಾಪಿಂಗ್ ಮಾಡಬಹುದಾಗಿದೆ ಎಂದಿದೆ ಕಂಪನಿ. ಸಣ್ಣ ಪುಟ್ಟ ವ್ಯಾಪಾರಿಗಳು ತಾವು ಉತ್ಪಾದಿಸುವ ವಸ್ತುಗಳಿಗೆ ಈ ಫೀಚರ್ ವೇದಿಕೆಯಾಗಲಿದ್ದು, ಗ್ರಾಹಕ ಹಾಗೂ ವ್ಯಾಪಾರಿಯ ನಡುವೆ ಸಂಪರ್ಕ ಸೇತುವೆಯಾಗಲಿದೆ.



## ಗೂಗಲ್‌ನಿಂದ 53 ಹೊಸ ಇಮೋಜಿ

ಭಾವನೆಯನ್ನು ಅಕ್ಷರದ ರೂಪದಲ್ಲಿ ವ್ಯಕ್ತಪಡಿಸಲಾಗದ ವೇಳೆ ಅದನ್ನು ಇಮೋಜಿಗಳ ಮೂಲಕ ವ್ಯಕ್ತಪಡಿಸುವ ಹೊಸ ಪದ್ಧತಿ ಈಗ ಚಾಲ್ತಿಯಲ್ಲಿದೆ. ಈ ಪದ್ಧತಿಗೆ ನೆರವಾಗಲೆಂದೇ ತರಹೇವಾರಿ ಇಮೋಜಿಗಳನ್ನು ವಾಟ್ಸ್‌ಆ್ಯಪ್, ಫೇಸ್‌ಬುಕ್ ಸೇರಿದಂತೆ ಹಲವಾರು ಸಾಮಾಜಿಕ ಜಾಲತಾಣ ಕಂಪನಿಗಳು ನೀಡುತ್ತಿವೆ. ಗೂಗಲ್ ತನ್ನ ನೂತನ ಆಪರೇಟಿಂಗ್ ಸಾಫ್ಟ್‌ವೇರ್ ಆ್ಯಂಡ್ರಾಯ್ಡ್ ಕ್ಯೂ ಜೊತೆಗೆ ಹೊಸದಾಗಿ 53 ಇಮೋಜಿಗಳನ್ನು ತನ್ನ ಬಳಕೆದಾರರಿಗೆ ಶೀಘ್ರವೇ ಪರಿಚಯಿಸಲಿದೆ.

ಪುರುಷ ಮತ್ತು ಮಹಿಳೆಯರ ವಿವಿಧ ಹುದ್ದೆ, ಕೆಲಸವನ್ನು ಪ್ರತಿಬಿಂಬಿಸುವ ಗೂಗಲ್‌ನ ಹೊಸ ಇಮೋಜಿಗಳು ಮೊದಲಿಗೆ ಪಿಕ್ಸೆಲ್ ಸ್ಮಾರ್ಟ್‌ಫೋನ್‌ಗೆ ಲಭ್ಯವಾಗಲಿವೆ. ಬಳಿಕ ಆ್ಯಂಡ್ರಾಯ್ಡ್ ಕ್ಯೂ ಆಧಾರಿತ ಬೇರೆಬೇರೆ ಸ್ಮಾರ್ಟ್‌ಫೋನ್‌ಗಳಿಗೆ ಲಭ್ಯವಿವೆ. ಈ ಮೊದಲು 176 ಇಮೋಜಿಗಳಿದ್ದು, ನಂತರ ಈಗ ಸುಮಾರು 3,000 ಇಮೋಜಿಗಳು ಲಭ್ಯ. ■